# ಹೊಸ ಜೋಡಿ




ಸ್ಟಾರ್ ನಿರ್ದೇಶಕ ಕರಣ್ ಜೋಹರ್ ಮೇಲೆ ಆತನ ಪ್ರಿಯಮಿತ್ರ ಶಾರೂಕ್ ಖಾನ್ ಸಖತ್ ಸಿಟ್ಟಿಗೆದ್ದಿದ್ದಾನಂತೆ. ಅದಕ್ಕೆ ಕಾರಣ ಕರಣ್ ಜೋಹರ್‌ಗೆ ಇತ್ತೀಚೆಗೆ ಸಲ್ಮಾನ್ ಖಾನ್ ಮೇಲೆ ಹೆಚ್ಚಾಗಿರುವ ಪ್ರೀತಿಯಂತೆ.

'ಜಲಕ್ ದಿಖ್‌ಲಾಜಾ' ಟೀವಿ ರಿಯಾಲಿಟಿ ಷೋನಲ್ಲಿ ತೀರ್ಪುಗಾರರಾಗಿ ಒಟ್ಟಿಗೇ ಕುಳಿತು, ತಮಾಷೆ ಮಾಡಿ, ಕುಣಿದ ಸಲ್ಮಾನ್ ಖಾನ್ ಮತ್ತು ಕರಣ್ ಜೋಹರ್ ಆ ಬಳಿಕ ಜಿಗ್ರೀ ದೋಸ್ತ್‌ಗಳಾಗಿದ್ದಾರಂತೆ. ಹಿಂದೆಲ್ಲಾ ಶಾರೂಕ್ ಖಾನ್ ಸಿನಿಮಾಗಳನ್ನೇ ನಿರ್ದೇಶಿಸುತ್ತಾ, ಶಾರೂಕ್‌ನನ್ನೇ ಹೊಗಳುತ್ತಿದ್ದ ಕರಣ್ ಜೋಹರ್ ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಸಲ್ಮಾನ್ ಬಗ್ಗೆ ಪ್ರಶಂಸೆಯ ಮಳೆಯನ್ನೇ ಹರಿಸಿದ್ದಾನೆ. "ಸಲ್ಮಾನ್ ಖಾನ್ ಬಗ್ಗೆ ನನಗೆ ತುಂಬ ಹೆಮ್ಮೆ ಉಂಟಾಗುತ್ತಿದೆ. ಆತನ ಚಿತ್ರಗಳು ಹಣದ ಮಳೆಯನ್ನೇ ಹರಿಸುತ್ತಿವೆ. ನನ್ನ ಕಚೇರಿಗೆ ಬರುವ ಎಲ್ಲ ಗೆಳೆಯರೂ 'ನೀನೇಕೆ ಸಲ್ಮಾನ್ ಚಿತ್ರವೊಂದನ್ನು ನಿರ್ದೇಶಿಸಬಾರದು' ಎಂದು ಪ್ರಶ್ನಿಸುತ್ತಿದ್ದಾರೆ. ಸಲ್ಮಾನ್‌ಗೆ ಕೋಟ್ಯಂತರ ಅಭಿಮಾನಿಗಳಿದ್ದಾರೆ" ಎಂದು ಕರಣ್ ಹೇಳಿರುವುದನ್ನು ಕೇಳಿ ಶಾರೂಕ್ ಹೊಟ್ಟೆ ಉರಿಸಿಕೊಂಡಿದ್ದಾನಂತೆ.

ಬಾಲಿವುಡ್‌ನ ಕೆಲವು ಮೂಲಗಳ ಪ್ರಕಾರ, ಶೀಘ್ರವೇ ಸಲ್ಮಾನ್ ನಾಯಕತ್ವದ ಹೊಸ ಚಿತ್ರವೊಂದನ್ನು ಕರಣ್ ನಿರ್ದೇಶಿಸಲಿದ್ದಾನೆ. ಈ ಮಧ್ಯೆ 'ಏಕ್ ಥಾ ಟೈಗರ್' ಬಾಕ್ಸಾಫೀಸ್ ಗಳಿಕೆ 200 ಕೋಟಿ ರೂಪಾಯಿ ದಾಟಿದ್ದು, ಸಲ್ಲೂ ಮಿಯಾನ ಕಾಲ್‌ಷೀಟ್ ಸಿಗುವುದು ಇನ್ನಷ್ಟು ದುಸ್ತರವಾಗಿದೆಯಂತೆ. ಆದರೆ ಕರಣ್ ಜೋಹರ್, ಬಾಲಿವುಡ್‌ನ ಅತ್ಯಂತ ಬುದ್ಧಿವಂತ ನಿರ್ದೇಶಕನೆಂದೇ ಹೆಸರಾಗಿರುವುದರಿಂದ ಸಲ್ಲೂ ಕಾಲ್‌ಷೀಟ್ ಪಡೆಯುವುದು ಕಷ್ಟವಲ್ಲ ಬಿಡಿ!

■ ಬಿಂದು

